ಶ್ರೀಮತಿ ಶಾರದಾ ಪೂರ್ಯ ನಾಯ್ಕ: ಅದನ್ನು ಮಾಡುವುದಕ್ಕೆ ಆಗುವುದಿಲ್ಲ, ಸುಳ್ಳು, ಅಷ್ಟೊಂದು ಸಿಬ್ಬಂದಿ ವರ್ಗ ಎಲ್ಲಿದೆ? ಅದನ್ನು onlineನಲ್ಲಿ ಯಾರು ಮಾಡುತ್ತಾರೆ?

ಅಧ್ಯಕ್ಷರು: ಇದು ಚರ್ಚೆ ಇಲ್ಲ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ: ನನಗೆ ಚರ್ಚೆ ಬೇಡ. ನನಗೆ ಸಮಸ್ಯೆ ಬಗೆಹರಿಯಬೇಕು. ದಯವಿಟ್ಟು ತಾವು ಅವಕಾಶ ಕೊಡಿ. ಈ ಹಿಂದೆ ಯಾವ ರೀತಿ ಮಾಡುತ್ತಿದ್ದೆವು. ಅದೇ ರೀತಿ ಆಗಲಿ.

ಅಧ್ಯಕ್ಷರು: No, ಹಾಗೆ ಆಗುವುದಿಲ್ಲ, ನೀವು ಸುಮ್ಮನಿರಿ. ನೀವು ಅದಕ್ಕೆ ಏನು ಉತ್ತರ ಹೇಳಬೇಕೋ ಹೇಳಿ. ಚರ್ಚೆ ಬೇಕೋ ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ, ಅವಕಾಶ ಕೊಡುತ್ತೇವೆ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ: ಅವರು ಉತ್ತರ ಹೇಳಿದರು.

ಶ್ರೀ ಟಿ.ಬಿ. ಜಯಚಂದ್ರ: ಅವರು ಸಮಸ್ಯೆ ಏನು ಎಂದು ಹೇಳಿದ್ದಾರೆ. ಆ ಸಮಸ್ಯೆಯನ್ನು ಬಗೆಹರಿಸುವಂತಹ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ. ಯಾವುದೇ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು: ಈಗ ಎಂ.ಟಿ. ಕೃಷ್ಣಪ್ಪ ಕೇಳಿ, ಅವರು ಇಲ್ಲ. ಸಿ.ಎನ್. ಬಾಲಕೃಷ್ಣ ಕೇಳಿ, ಇಲ್ಲ. ಪಿ. ರಾಜೀವ್ ರವರು ಕೇಳಿ.

(ಶ್ರೀ ಎಂ.ಟಿ. ಕೃಷ್ಣಪ್ಪ ಹಾಗೂ ಶ್ರೀ ಸಿ.ಎನ್. ಬಾಲಕೃಷ್ಣ ಗೈರುಹಾಜರು)

ಅಧ್ಯಕ್ಷರು: online ಅಂತೆ, ಇದನ್ನು ಯಾರು ಹೇಳಿದಿರಿ?

6. ವಿಷಯ: ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–1 ಮತ್ತು 2ರ ಹಂತದಲ್ಲಿ ಕುಡಚಿ ಮತಕ್ಷೇತ್ರದಲ್ಲಿ ಯಾವುದೇ ರಸ್ತೆ ಅಭಿವೃದ್ಧಿಪಡಿಸದಿರುವುದರಿಂದ ಈ ಸಾಲಿನಲ್ಲಿ 3ನೇ ಹಂತದಲ್ಲಿ

ಕಾಗವಾಡ–ಕಲಾದಗಿ ಹಾಗೂ ಮಂಗಸೂಳ್ಳಿ–ಲಕ್ಷ್ಮೇಶ್ವರ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.

ಶ್ರೀ ಪಿ. ರಾಜೀವ್ (ಕುಡಚಿ): ಮಾನ್ಯ ಅಧ್ಯಕ್ಷರೆ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–1 ಮತ್ತು 2 ರ ಹಂತದಲ್ಲಿ ಕುಡಚಿ ಮತಕ್ಷೇತ್ರದಲ್ಲಿ ಯಾವುದೇ ರಸ್ತೆ ಅಭಿವೃದ್ಧಿಪಡಿಸದಿರುವುದರಿಂದ ಈ ಸಾಲಿನಲ್ಲಿ 3ನೇ ಹಂತದಲ್ಲಿ ಕಾಗವಾಡ–ಕಲಾದಗಿ ಹಾಗೂ ಮಂಗಸೂಳ್ಳಿ–ಲಕ್ಷ್ಮೇಶ್ವರ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಕರ್ನಾಟಕ ವಿಧಾನ ಸಭೆ ಸದಸ್ಯರಾದ ಮಾನ್ಯ ಶ್ರೀ ರಾಜೀವ್ ಪಿ. ರವರ ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ 65ರ ಮೇರೆಗೆ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–1 ಮತ್ತು 2ರ ಹಂತದಲ್ಲಿ ಕುಡಚಿ ಮತ ಕ್ಷೇತ್ರದಲ್ಲಿ ಯಾವುದೇ ರಸ್ತೆ ಅಭಿವೃದ್ಧಿಪಡಿಸುವುದರಿಂದ ಈ ಸಾಲಿನ ಈ ಯೋಜನೆ–3ನೇ ಹಂತದಲ್ಲಿ ಕಾಗವಾಡ–ಕಲಾದಗಿ ಹಾಗೂ ಮಂಗಸೂಳಿ–ಲಕ್ಷ್ಮೇಶ್ವರ ರಸ್ತೆಗಳನ್ನು ಅಭಿವೃದ್ಧಿಪಡಿಸುವ ವಿಷಯದ ಬಗ್ಗೆ ಲೋಕೋಪಯೋಗಿ ಸಚಿವರ ಪರವಾಗಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಸಚಿವರು): ರಾಜ್ಯ ಅಭಿವೃದ್ಧಿ ಯೋಜನೆಯ 3ನೇ ಹಂತದಲ್ಲಿ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುವ ಕುರಿತು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಶ್ರೀ ಪಿ. ರಾಜೀವ್: HSDPA ಮೊದಲನೇ ಹಂತ ಮತ್ತು ಎರಡನೇ ಹಂತದಲ್ಲಿ ನನ್ನ ಮತಕ್ಷೇತ್ರದಲ್ಲಿ ಯಾವುದೇ ಕಾಮಗಾರಿ ತೆಗೆದುಕೊಂಡಿಲ್ಲ. ಅದಕ್ಕಾಗಿ ಎಲ್ಲಾ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿವೆ. ಅದಕ್ಕೆ ಕಾನೂನು ಸಚಿವರು ಮೂರನೇ ಹಂತದಲ್ಲಿ ಪೂರ್ತಿ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು: ಅವರು ಉತ್ತರದಲ್ಲಿ ಎನು ಹೇಳಿದ್ದಾರೆಂದು ಹೇಳಿ.

ಶ್ರೀ ಪಿ. ರಾಜೀವ್: ಮಾನ್ಯ ಅಧ್ಯಕ್ಷರೆ, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ನಿಮಗೆ ಏನು ಬೇಕು ಎಂದು ಕೇಳಿ.

ಶ್ರೀ ಪಿ. ರಾಜೀವ್: ನನ್ನ ಮತಕ್ಷೇತ್ರದಲ್ಲಿ ಮೂರನೇ ಹಂತದಲ್ಲಿ ಎಲ್ಲಾ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ನನಗೆ ಭರವಸೆ ಬೇಕು.

ಅಧ್ಯಕ್ಷರು: ಸಚಿವರು ಭರವಸೆ ಇದ್ದರೆ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ: ಈ ವಿಚಾರದಲ್ಲಿ ಭರವಸೆಯನ್ನು ನೀಡುವುದರ ಜೊತೆಗೆ ಸರ್ಕಾರ ನಿಮ್ಮ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತದೆ. ಇದನ್ನು ಅನುಷ್ಠಾನ ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ.

7. ವಿಷಯ: ಹರಿಹರ ನಗರದಲ್ಲಿ ಹಾದು ಹೋಗಿರುವ ಬೀರೂರು–ಸಮಸಗಿ ರಾಜ್ಯ ಹೆದ್ದಾರಿ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಹೆಚ್.ಎಸ್. ಶಿವಶಂಕರ ಪರವಾಗಿ): ಮಾನ್ಯ ಅಧ್ಯಕ್ಷರೆ, ಅವರು ಪತ್ರ ಕೊಟ್ಟಿದ್ದಾರೆ. ಅವರ ಪರವಾಗಿ ನಾನು ಪ್ರಶ್ನೆ ಕೇಳುತ್ತೇನೆ. ಹರಿಹರ ನಗರದಲ್ಲಿ ಹಾದು ಹೋಗಿರುವ ಬೀರೂರು–ಸಮಸಗಿ ರಾಜ್ಯ ಹೆದ್ದಾರಿ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು)(ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರವನ್ನು ನೀಡಿದೆ.